# ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಪರೀಕ್ಷಿಸಿದ ಬಗೆ

ಸ್ವಾಮಿ ರಘುವೀರಾನಂದ

**ಭ**ಗವಂತನು ತನ್ನ ಭಕ್ತರನ್ನು ನಾನಾ ವಿಧದಲ್ಲಿ ಪರೀಕ್ಷಿಸುತ್ತಾನೆ ಎಂದು ನಾವು ಪುರಾಣಗಳಲ್ಲಿ, ಇತಿಹಾಸಗಳಲ್ಲಿ ಮತ್ತು ಅನೇಕ ಮಹಾಪುರುಷರ ಜೀವನಗಳಲ್ಲಿ ಓದುತ್ತೇವೆ. ಹಾಗೇ ಒಬ್ಬ ಗುರು ಅಥವಾ ಶಿಕ್ಷಕನು ತನ್ನ ಶಿಷ್ಯರಿಗೆ ವಿದ್ಯೆಯನ್ನು ಕಲಿಸುವ ಮೊದಲು ಅಥವಾ ನಂತರ ಅವರನ್ನು ಪರೀಕ್ಷಿಸುತ್ತಾನೆ. ಈ ಶಿಷ್ಯನು ವಿದ್ಯೆಯನ್ನು ಸ್ವೀಕರಿಸಲು ಅರ್ಹತೆಯನ್ನು ಪಡೆದಿದ್ದಾನೆಯೇ ಇಲ್ಲವೇ ಎಂದು ಪರೀಕ್ಷಿಸುತ್ತಾನೆ. ಇಲ್ಲವೇ ತನ್ನ ಶಿಷ್ಯರು ತಾನು ಕಲಿಸಿದ ವಿದ್ಯೆಯನ್ನು ಎಷ್ಟು ಕರಗತಗೊಳಿಸಿಕೊಂಡಿದ್ದಾರೆ ಅಥವಾ ಅವರು ಅದರಲ್ಲಿ ಎಷ್ಟು ನೈಪುಣ್ಯತೆಯನ್ನು ಹೊಂದಿದ್ದಾರೆ ಎಂದು ತಿಳಿಯಲೂ ಕೂಡ ಪರೀಕ್ಷೆ ಮಾಡುತ್ತಾನೆ. ಇದು ಸಾಮಾನ್ಯವಾಗಿ ಲೋಕದಲ್ಲಿ ನಡೆದುಕೊಂಡು ಬಂದ ಪದ್ಧತಿ. ಆದರೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಪರೀಕ್ಷಿಸುತ್ತಿದ್ದ ರೀತಿ ಹಾಗೂ ಉದ್ದೇಶಗಳು ಬಹಳ ವಿಶಿಷ್ಟವಾದುವು. ಅದರಲ್ಲೂ ಅವರು ತಮ್ಮ ಅಂತರಂಗ ಶಿಷ್ಯರು ಎಂದು ಯಾರನ್ನು ಕರೆಯುತ್ತಿದ್ದರೋ ಅವರನ್ನು ಪರೀಕ್ಷಿಸುತ್ತಿದ್ದ ವಿಧಾನ ಮತ್ತು ಅದರ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಕೆಲವು ಶಿಷ್ಯರ ಹಿಂದಿನ ಹಾಗೂ ಮುಂದಿನ ಜೀವನದ ಬಗ್ಗೆ ತಿಳಿದುಕೊಳ್ಳಲು ಅವರು ಪರೀಕ್ಷಿಸುತ್ತಿದ್ದರೆ, ಇನ್ನು ಕೆಲವರಲ್ಲಿರುವ ದೋಷಗಳನ್ನು ತಿಳಿದು ಅದರಿಂದ ಅವರನ್ನು ಮುಕ್ತಗೊಳಿಸಲು ಪ್ರಯತ್ನಿಸುತ್ತಿದ್ದರು. ಯಾರಲ್ಲಿ ಯಾವ ಒಳ್ಳೆಯ ಗುಣ ವಿಶೇಷವಾಗಿ ಸುಪ್ತವಾಗಿದೆಯೋ ಅದನ್ನು ಗುರುತಿಸಿ, ಆ ಗುಣವು ಬೆಳಕಿಗೆ ಬರಲು ಸಹಾಯ ಮಾಡುತ್ತಿದ್ದರು. ತಮ್ಮಲ್ಲಿಗೆ ಬರುವವರಲ್ಲಿ ಕೆಲವರಾದರೂ ಅವರು ಯಾರು, ಇಲ್ಲಿಗೂ (ತಮ್ಮನ್ನು ತೋರಿಸಿ) ಅವರಿಗೂ ಸಂಬಂಧವೇನು ಎಂದು ಅರಿತುಕೊಂಡು ಬಿಟ್ಟರೆ ಸಾಕು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.



ಶ್ರೀರಾಮಕೃಷ್ಣರ ಶಿಷ್ಯರುಗಳಲ್ಲಿ ಅಗ್ರಗಣ್ಯರಾದ ವೀರಸಂನ್ಯಾಸಿ ವಿವೇಕಾನಂದರನ್ನು ಅಂದರೆ ನರೇಂದ್ರನನ್ನು ಅವರು ಮೊದಲ ಬಾರಿ ಪರೀಕ್ಷಿಸಿದ ಉದ್ದೇಶ ಅವನ ನಿಜ ಸತ್ತ್ವ ಹಾಗೂ ಸ್ವರೂಪವನ್ನು ತಿಳಿಯಲು ಮತ್ತು ಅದರ ಸ್ವಲ್ಪ ಅನುಭವವನ್ನು ಅವನಿಗೂ ಮಾಡಿಸಲು. ನರೇಂದ್ರನು ಶ್ರೀರಾಮಕೃಷ್ಣರನ್ನು ಎರಡನೆಯ ಬಾರಿ ದಕ್ಷಿಣೇಶ್ವರದಲ್ಲಿ ಭೇಟಿಯಾದಾಗ ಈ ಘಟನೆ ನಡೆಯುತ್ತದೆ: ಅಂದು ಶ್ರೀರಾಮಕೃಷ್ಣರು ತಮ್ಮ ಕೋಣೆಯಲ್ಲಿ ಒಬ್ಬರೇ ಇದ್ದರು. ನರೇಂದ್ರನನ್ನು ಹತ್ತಿರ ಕರೆದು, ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಭಾವಾವಿಷ್ಟರಾಗಿ ತಮ್ಮ ದೃಷ್ಟಿಯನ್ನು ಅವನಲ್ಲೇ ನೆಟ್ಟು ತಮ್ಮ ಬಲಗಾಲನ್ನು ಅವನ ದೇಹದ ಮೇಲೆ ಇಟ್ಟರು. ಆ ಒಂದು ಸ್ಪರ್ಶದಿಂದಲೇ ನರೇಂದ್ರನಿಗೆ ಅದ್ಭುತವಾದ ಅನುಭವವಾಗುತ್ತದೆ. ಅವನು ನೋಡುತ್ತಿದ್ದಂತೆಯೇ ಇಡೀ ವಿಶ್ವವೇ ಕಣ್ಮರೆಯಾಗುತ್ತಿದ್ದಂತೆ, ತನ್ನ ಸುತ್ತ ಇರುವ ಗೋಡೆಗಳು, ತಾನಿರುವ ಕೋಣೆ, ದೇವಸ್ಥಾನ ಎದುರಿಗಿರುವ ತೋಟ, ತನ್ನನ್ನೂ ಸೇರಿಸಿ ಎಲ್ಲವೂ ಅದೃಶ್ಯವಾಗುತ್ತಿರುವಂತೆ ನರೇಂದ್ರನಿಗೆ ಭಾಸವಾಯಿತು. ತನ್ನ ಪ್ರಾಣವು ಹೊರಟು ಹೋಗುವುದೇನೋ ಎಂಬ ಭಯದಿಂದ ಜೋರಾಗಿ ಅವನು ಕೂಗಿಕೊಂಡನು, “ಮಹಾಶಯರೇ, ನೀವು ನನಗೆ ಏನು ಮಾಡುತ್ತಿದ್ದೀರಿ? ನನಗೆ ಮನೆಯಲ್ಲಿ ಅಪ್ಪ-ಅಮ್ಮ ಇದ್ದಾರೆ” ಎಂದು. ಅನಂತರ ಶ್ರೀರಾಮಕೃಷ್ಣರು ನಕ್ಕು ಅವನ ಎದೆಯನ್ನು ಸ್ಪರ್ಶಿಸುತ್ತಾ ಹೇಳಿದರು, “ಒಳ್ಳೆಯದು. ಈಗ ಇಷ್ಟು

ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ಬಗೆಗಳು ವಿನೂತನವಾದುದು. ಅವರನ್ನು ಹಲವು ಸಂದರ್ಭಗಳಲ್ಲಿ ತಿದ್ದಿ ತೀಡಿ ಪರೀಕ್ಷಿಸುತ್ತಿದ್ದ ವಿಧಾನ ಅಸದೃಶವಾದುದು. ಈ ಅಂಶವನ್ನು ಹಲವು ಘಟನೆಗಳ ಮೂಲಕ ಸರಳವಾಗಿ ನಿರೂಪಿಸಿರುವ ಸ್ವಾಮೀಜಿಯವರು ಆಂಧ್ರಪ್ರದೇಶದ ಕಡಪಾದಲ್ಲಿನ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಕು. ಮುಂದೆ ಸಮಯ ಬಂದಾಗ ನಿನಗೇ ಇದೆಲ್ಲವೂ ಅರ್ಥ ವಾಗುತ್ತದೆ." ನಂತರ ನರೇಂದ್ರನು ತನ್ನ ಸಾಮಾನ್ಯ ಸ್ಥಿತಿಗೆ ಮರಳಿದನು. ನರೇಂದ್ರನಿಗೆ ತನ್ನ ಸದೃಢವಾದ ದೇಹ, ಬಲವಾದ ಮನಸ್ಸು ಮತ್ತು ಚುರುಕಾದ ಬುದ್ಧಿಶಕ್ತಿಗಳಲ್ಲಿ ಅಪಾರವಾದ ವಿಶ್ವಾಸವಿತ್ತು. ಆದರೆ ಶ್ರೀರಾಮಕೃಷ್ಣರು ಒಡ್ಡಿದ ಈ ಪರೀಕ್ಷೆಯಿಂದ ಅವೆಲ್ಲವೂ ಗೌಣ ಎನ್ನುವ ನಿರ್ಣಯಕ್ಕೆ ಬಂದನು. ಶ್ರೀರಾಮ ಕೃಷ್ಣರ ಶಕ್ತಿಯ ಮುಂದೆ ತನ್ನ ಅಸಹಾಯಕತೆಯ ಅರಿವನ್ನು ಪಡೆದುಕೊಂಡನು. ಆದರೂ ಮೂರನೆಯ ಸಾರಿ ಭೇಟಿಯಾದಾಗ ತಾನು ಬಹಳ ಎಚ್ಚರಿಕೆಯಿಂದ ಇರಬೇಕೆಂದು ಅಂದುಕೊಂಡರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಭಾವಾವಸ್ಥೆಯಲ್ಲಿ ಶ್ರೀರಾಮಕೃಷ್ಣರು ನರೇಂದ್ರನನ್ನು ಸ್ಪರ್ಶಿಸಿದ ತಕ್ಷಣ ಅವನು ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡನು. ಈ ಪರೀಕ್ಷೆಯಲ್ಲಿ ಶ್ರೀರಾಮ ಕೃಷ್ಣರು ಅವನ ಹಿಂದಿನ ಜೀವನದ ಬಗ್ಗೆ ಮತ್ತು ಈಗ ಅವನ ಕಾರ್ಯಗಳ ಬಗ್ಗೆ ಎಲ್ಲ ವಿವರಗಳನ್ನೂ ತಿಳಿದುಕೊಂಡರು. **'ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ, ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ'** ಎನ್ನುವ ಕಠೋಪನಿಷತ್ತಿನ ನುಡಿಯಂತೆ, ಇಂದಿನ ದಿನಗಳಲ್ಲಿ ಶ್ರೀರಾಮಕೃಷ್ಣರಂತಹ ಗುರುವೂ ವಿರಳ, ನರೇಂದ್ರನಂತಹ ಶಿಷ್ಯನು ಸಿಗುವುದೂ ಆಶ್ಚರ್ಯಕರ. ಇಂತಹ ಗುರುಶಿಷ್ಯರನ್ನು ಪಡೆದ ಭಾರತಮಾತೆ ಧನ್ಯ.

ಶ್ರೀರಾಮಕೃಷ್ಣರು ನರೇಂದ್ರನನ್ನು ಪರೀಕ್ಷಿಸಿದ ಇನ್ನೊಂದು ಪ್ರಸಂಗವನ್ನು ನೋಡೋಣ. ಒಮ್ಮೆ ಶ್ರೀರಾಮಕೃಷ್ಣರು ನರೇಂದ್ರನ ಕುರಿತಾದ ತಮ್ಮ ವರ್ತನೆಯನ್ನು ಒಮ್ಮೆಲೇ ಬದಲಾಯಿಸಿದರು. ನರೇಂದ್ರನು ತಮ್ಮನ್ನು ಭೇಟಿಯಾಗಲು ಬಂದರೂ ಅವನಿಗೆ ಯಾವುದೇ ವಿಶೇಷ ಆದರವನ್ನೂ ತೋರದೇ ಕೇವಲ ಅವನನ್ನು ನೋಡಿ ಸುಮ್ಮನಾದರು. ನರೇಂದ್ರನು ಶ್ರೀರಾಮಕೃಷ್ಣರು ಭಾವಾವಸ್ಥೆಯಲ್ಲಿ ಇದ್ದಾರೇನೋ ಎಂದುಕೊಂಡನು. ಹೀಗೆ ಸಂಜೆ ಮನೆಗೆ ಹೊರಡುವಾಗಲೂ ಸುಮ್ಮನೆ ಅವರಿಗೆ ನಮಸ್ಕರಿಸಿ ಹಿಂದಿರುಗಿದನು. ಹೀಗೆ ಅನೇಕ ಸಾರಿ ನರೇಂದ್ರನು ಶ್ರೀರಾಮಕೃಷ್ಣರನ್ನು ಭೇಟಿಯಾದಾಗಲೂ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಹೀಗೆ ಒಂದು ತಿಂಗಳು ಕಳೆದ ನಂತರ ಶ್ರೀರಾಮಕೃಷ್ಣರು ನರೇಂದ್ರನನ್ನು ಕೇಳಿದರು, "ನೋಡು, ನಾನು ನಿನ್ನೊಡನೆ ಒಂದು ಮಾತನ್ನು ಕೂಡ ಆಡುತ್ತಿಲ್ಲ, ಯಾವ ಆದರವನ್ನೂ ನಿನಗೆ ತೋರಿಸುತ್ತಿಲ್ಲ. ಆದರೂ ನೀನು ಏಕೆ ಇಲ್ಲಿಗೆ ಬರುತ್ತಿದ್ದೀಯೇ?" ಎಂದು. ಆಗ ನರೇಂದ್ರ, "ಮಹಾಶಯರೇ ನಾನು ಕೇವಲ ನಿಮ್ಮ ಮಾತನ್ನು ಕೇಳಲು ಇಲ್ಲಿಗೆ ಬರುತ್ತಿಲ್ಲ. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನನ್ನ ಮನಸ್ಸು ನಿಮ್ಮನ್ನು ನೋಡಬೇಕೆಂದು ಕಾತರಿಸುತ್ತದೆ. ಆದ್ದರಿಂದ ನಾನು ಇಲ್ಲಿಗೆ ಬರುತ್ತೇನೆ" ಎಂದನು. ಆಗ ಶ್ರೀರಾಮಕೃಷ್ಣರು ಹೇಳಿದರು, "ನೋಡು, ನಾನು ನಿನ್ನನ್ನು ಪರೀಕ್ಷಿಸುತ್ತಿದ್ದೆ. ಕೇವಲ ನಿನ್ನಂತಹ ಆಧ್ಯಾತ್ಮಿಕ ಪಿಪಾಸುಗಳಿಗೆ, ಬಲಶಾಲಿಯಾದವರಿಗೆ ಮಾತ್ರ ಇಂತಹ ಅನಾದರಣೆ ಹಾಗೂ ಉಪೇಕ್ಷೆಯನ್ನು ಸಹಿಸಲು ಸಾಧ್ಯ. ಬೇರೆಯವರಾದರೆ ಇಲ್ಲಿಗೆ ಬರುವುದನ್ನು ಎಂದೋ ನಿಲ್ಲಿಸಿಬಿಡುತ್ತಿದ್ದರು."

> **ಶ್ರೀರಾಮಕೃಷ್ಣರು ಅದ್ಭುತ ಆಧ್ಯಾತ್ಮಿಕ ಸಾಧನೆಗಳಿಂದ, ತಮ್ಮ ದೇಹ ಮತ್ತು ಮನಸ್ಸುಗಳನ್ನು ಸೂಕ್ಷ್ಮ ಆಧ್ಯಾತ್ಮಿಕ ಶಕ್ತಿಗಳು ನೆಲೆಸುವ ಮತ್ತು ಸಂವಹಿಸುವ ಮಾಧ್ಯಮಗಳನ್ನಾಗಿ ಮಾಡಿಕೊಂಡಿದ್ದರು. ಆದ್ದರಿಂದ, ಒಬ್ಬ ಭಕ್ತನು ಅವರನ್ನು ಸಮೀಪಿಸಿದ ಕೂಡಲೇ ಅವರ ಮನಸ್ಸು ಒಡನೆಯೇ ಆ ವ್ಯಕ್ತಿಯ ಆಧ್ಯಾತ್ಮಿಕ ದೃಷ್ಟಿಕೋನದಿಂದ, ಅದು ತಮ್ಮದೇ ಏನೋ ಎಂಬಂತೆ, ರಂಜಿತವಾಗುತ್ತಿತ್ತು ಹಾಗೂ ತಾನೇ ತಾನಾಗಿ, ಆ ವ್ಯಕ್ತಿಯ ಆಧ್ಯಾತ್ಮಿಕ ಪ್ರಗತಿಯ ಹಂತಕ್ಕೆ ಸರಿಸಮನಾಗಿ ನಿಲ್ಲುತ್ತಿತ್ತು. ಆಗ ಆತನ ಬಗೆಗಿನ ಎಲ್ಲ ಸಂಗತಿಗಳೂ ಅವರಿಗೆ ತಿಳಿದುಬರುತ್ತಿದ್ದವು.**
>
> **– ಸ್ವಾಮಿ ಶಾರದಾನಂದ**

ನಮಗೆ ಪ್ರೀತಿಪಾತ್ರರಾದವವರು ಯಾರೇ ಆಗಲಿ, ಅವರು ನಮ್ಮನ್ನು ಕಡೆಗಣಿಸಿದರೆ ಸಹಜವಾಗಿ ನಾವು ಅವರಲ್ಲಿ ದೋಷ ವನ್ನು ಕಾಣಲು ಪ್ರಾರಂಭಿಸುತ್ತೇವೆ ಅಥವಾ ಅವರನ್ನು ದ್ವೇಷಿಸಲೂ ಬಹುದು. ಆದರೆ ನರೇಂದ್ರನಲ್ಲಿ ಶ್ರೀರಾಮಕೃಷ್ಣರ ವರ್ತನೆಯಿಂದ, ಅವರಲ್ಲಿನ ಪ್ರೀತಿ ಇನ್ನೂ ಹೆಚ್ಚಾಯಿತೇ ವಿನಃ ಕಡಿಮೆಯಾಗಲಿಲ್ಲ. ಅದನ್ನೇ ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ, "ಯಾರು ಮಾನ–ಅಪಮಾನ, ಸ್ತುತಿ–ನಿಂದೆ ಮುಂತಾದ ದ್ವಂದ್ವಗಳನ್ನು ಸಮಾನ ವಾಗಿ ಕಾಣುತ್ತಾರೋ, ಅಂತಹ ಭಕ್ತರು ನನಗೆ ಅತ್ಯಂತ ಪ್ರಿಯರು" ಎಂದು.

ಇನ್ನೊಮ್ಮೆ ಶ್ರೀರಾಮಕೃಷ್ಣರು ನರೇಂದ್ರನನ್ನು, ಸಂದಿಗ್ಧ ಪರಿಸ್ಥಿತಿಗೆ ಸಿಲುಕಬಹುದಾದ ಒಂದು ಪರೀಕ್ಷೆಗೆ ಒಳಪಡಿಸುತ್ತಾರೆ. ಅವರು ಒಮ್ಮೆ ಹೇಳಿದರು, "ನೋಡು, ನಾನು ಮಾಡಿದ ಅತ್ಯಂತ ಕಠಿಣವಾದ ತಪಸ್ಸಿನ ಫಲವಾಗಿ ನನ್ನಲ್ಲಿ ಅನೇಕ ಅಲೌಕಿಕ ಶಕ್ತಿಗಳು ಸಂಚಯವಾಗಿವೆ. ಆ ಶಕ್ತಿಗಳನ್ನು ನಿನಗೆ ವರ್ಗಾಯಿಸಲು ತಾಯಿಯನ್ನು ಕೇಳಿಕೊಳ್ಳೋಣ ಎಂದು ಯೋಚಿಸುತ್ತಿದ್ದೇನೆ. ಏಕೆಂದರೆ ತಾಯಿ ನನಗೆ ತಿಳಿಸಿದ್ದಾಳೆ, ನೀನು ಅವುಗಳನ್ನು ಮುಂದೆ ಆವಶ್ಯಕತೆ ಬಂದಾಗ ಉಪ ಯೋಗಿಸಲು ಸಾಧ್ಯ ಎಂದು. ನೀನೇನು ಹೇಳುತ್ತೀಯೆ?" ಆಗ ನರೇಂದ್ರನು ಕೇಳುತ್ತಾನೆ, "ಆ ಶಕ್ತಿಗಳಿಂದ ನಾನು ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವಾಗುತ್ತದೆಯೇ?" ಶ್ರೀರಾಮಕೃಷ್ಣರೆಂದರು, "ಇಲ್ಲ, ಅವು ಭಗವಂತನ ಸಾಕ್ಷಾತ್ಕಾರ ವನ್ನು ಪಡೆಯಲು ಸಹಾಯಕವಾಗಲಾರವು, ಆದರೆ ಸಾಕ್ಷಾತ್ಕಾರದ ನಂತರ ಅವು ನಿನಗೆ ಭಗವಂತನ ಕಾರ್ಯವನ್ನು ಮಾಡಲು ಉಪಯುಕ್ತವಾಗುತ್ತವೆ." ಆಗ ನರೇಂದ್ರ ಹೇಳಿದ, "ನಾನು ಮೊದಲು ಭಗವಂತನ ಸಾಕ್ಷಾತ್ಕಾರವನ್ನು ಪಡೆಯುತ್ತೇನೆ. ಅನಂತರ ಆ ಶಕ್ತಿಗಳು ಬೇಕೋ ಬೇಡವೋ ಎಂದು ಯೋಚಿಸು

ತ್ತೇನೆ. ಏಕೆಂದರೆ ಮೊದಲೇ ಅವುಗಳನ್ನು ಪಡೆದುಕೊಂಡರೆ ನಾನು ಭಗವಂತನನ್ನೇ ಮರೆತು ನನ್ನ ಸ್ವಾರ್ಥಕ್ಕಾಗಿ ಅವುಗಳನ್ನು ಉಪಯೋಗಿಸುವ ಪ್ರಸಂಗಗಳು ಬರಬಹುದು." ನರೇಂದ್ರನಿಗೆ ಭಗವಂತನಲ್ಲಿದ್ದ ಅನನ್ಯವಾದ ಭಕ್ತಿಯನ್ನು ಕಂಡು ಶ್ರೀರಾಮ ಕೃಷ್ಣರಿಗೆ ಆನಂದವಾಗುತ್ತದೆ. ಸಾಮಾನ್ಯ ಮನುಷ್ಯರು ಎಲ್ಲೋ ಸ್ವಲ್ಪ ಶಕ್ತಿಯನ್ನು ಗಳಿಸಲು ಎಷ್ಟೋ ವರ್ಷಗಳ ಕಾಲ ಕಷ್ಟಪಟ್ಟು ತಪಸ್ಸನ್ನು ಮಾಡುತ್ತಾರೆ. ಆದರೆ ನರೇಂದ್ರನು ತನಗೆ ಸುಲಭವಾಗಿ ದೊರಕಬಹುದಾದ ಎಲ್ಲ ಶಕ್ತಿಗಳನ್ನೂ ನಿರಾಕರಿಸುತ್ತಾನೆ.

ನರೇಂದ್ರನ ತಂದೆ ಅನಿರೀಕ್ಷಿತವಾಗಿ ಮರಣ ಹೊಂದಿದ ಬಳಿಕ ಅವನ ಮನೆಯ ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು. ಸಂಸಾರನಿರ್ವಹಣೆಗಾಗಿ ಅವನು ಯಾವುದೋ ಒಂದು ಹಂಗಾಮಿ ಕೆಲಸಕ್ಕೆ ಸೇರಿಕೊಂಡಿದ್ದನು. ಆಗ ಒಂದು ದಿನ ನರೇಂದ್ರನು ಶ್ರೀರಾಮಕೃಷ್ಣರಲ್ಲಿಗೆ ಬಂದು, "ದಯವಿಟ್ಟು ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವಂತೆ ಜಗನ್ಮಾತೆಯಲ್ಲಿ ಪ್ರಾರ್ಥಿಸಿರಿ" ಎಂದು ಅವರಲ್ಲಿ ಕೇಳಿಕೊಂಡನು. ಏಕೆಂದರೆ ಅವನಿಗೆ ಸಂಪೂರ್ಣ ವಿಶ್ವಾಸವಿತ್ತು, ಶ್ರೀರಾಮಕೃಷ್ಣರ ಪ್ರಾರ್ಥನೆಯನ್ನು ಜಗನ್ಮಾತೆ ಈಡೇರಿಸುತ್ತಾಳೆ ಎಂದು. ಆದರೆ ಶ್ರೀರಾಮಕೃಷ್ಣರು ನರೇಂದ್ರನಿಗೆ, "ನೀನೇ ಹೋಗಿ ಕೇಳಿಕೋ. ನಿನ್ನ ಪ್ರಾರ್ಥನೆ ಈಡೇರುತ್ತದೆ" ಎಂದು ಮಾತುಕೊಟ್ಟರು. ನಂತರ ನರೇಂದ್ರ ಏನೋ ನಿರೀಕ್ಷೆಯಿಂದ ಮಂದಿರದ ಒಳಕ್ಕೆ ಬರುತ್ತಾನೆ. ಜಗನ್ಮಾತೆಯ ವಿಗ್ರಹದ ಎದುರಿಗೆ ಬಂದ ತಕ್ಷಣ ಅವನಿಗೆ ಅದು ಜೀವಂತವಾಗಿರುವಂತೆ ಕಂಡಿತು. ತಾನು ಏನನ್ನು ಕೇಳಲು ಬಂದಿದ್ದನೋ ಅದನ್ನು ಮರೆತುಬಿಟ್ಟನು. ದಿವ್ಯವಾದ ಆನಂದದಲ್ಲಿ ಮುಳುಗಿ ಆ ತಾಯಿಯ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ, "ಅಮ್ಮಾ, ನನಗೆ ವಿವೇಕವನ್ನು ಕೊಡು, ವೈರಾಗ್ಯವನ್ನು ಕೊಡು, ಜ್ಞಾನವನ್ನು ಕೊಡು, ಭಕ್ತಿಯನ್ನು ಕೊಡು, ನಿನ್ನ ದರ್ಶನವನ್ನು ಕೊಡು" ಎಂದು ಕಂಬನಿದುಂಬಿ ಬೇಡಿ ಕೊಂಡನು. ಅನಂತರ ಶ್ರೀರಾಮಕೃಷ್ಣರಲ್ಲಿಗೆ ಹೋಗಿ ನಡೆದು ದೆಲ್ಲವನ್ನೂ ಹೇಳಿದ. ಆದರೆ ಶ್ರೀರಾಮಕೃಷ್ಣರು ಪುನಃ ಅವನನ್ನು ತಾಯಿಯನ್ನು ಪ್ರಾರ್ಥಿಸುವಂತೆ ಹಿಂದಕ್ಕೆ ಕಳಿಸಿದರು. ಈ ಸಾರಿಯೂ ಮೊದಲಿನಂತೆಯೇ ನಡೆಯಿತು. ಮೂರನೆಯ ಸಾರಿ ನರೇಂದ್ರ ತಾಯಿಯ ಬಳಿ ಬಂದಾಗ, ಅವನಿಗೆ ಜಗನ್ಮಾತೆಯ ಬಳಿಯಲ್ಲಿ ಬಂದು ನಾನು ಕೇವಲ ಕ್ಷುದ್ರವಾದ ವಸ್ತುಗಳಿಗಾಗಿ ಪ್ರಾರ್ಥಿಸುತ್ತಿದ್ದೇನಲ್ಲ ಎಂದು ನಾಚಿಕೆಯಾಯಿತು. ನಂತರ ಶ್ರೀರಾಮಕೃಷ್ಣರು ಅವನನ್ನು ಹರಸಿ ಹೇಳಿದರು, "ಒಳ್ಳೆಯದು, ಇನ್ನು ಮೇಲೆ ನಿನ್ನ ಮನೆಯವರಿಗೆ ಕನಿಷ್ಠ ಊಟ ಮತ್ತು ಬಟ್ಟೆಗಳಿಗೆ ಯಾವುದೇ ಕೊರತೆ ಇರುವುದಿಲ್ಲ" ಎಂದು. ಈ ಪರೀಕ್ಷೆಯಲ್ಲಿಯೂ ಶ್ರೀರಾಮಕೃಷ್ಣರು ನರೇಂದ್ರನ ಸದ್ಗುಣಗಳನ್ನು ಗುರುತಿಸಿ ಮೆಚ್ಚಿಕೊಳ್ಳುತ್ತಾರೆ. ನರೇಂದ್ರ ಮುಂದೆ ಒಬ್ಬ ಮಹಾನ್ ಲೋಕಶಿಕ್ಷಕನಾಗುತ್ತಾನೆ ಎಂದು ಶ್ರೀರಾಮಕೃಷ್ಣರಿಗೆ ತಿಳಿದಿತ್ತು. ಆದ್ದರಿಂದ ಇಂತಹ ಪರೀಕ್ಷೆಗಳ ಮೂಲಕ ಒಬ್ಬ ವಿಶ್ವಗುರುವಿನಲ್ಲಿ ಇರಬೇಕಾದ ತ್ಯಾಗ ಮನೋಭಾವನೆ, ಭಕ್ತಿ, ವಿವೇಕ ಮುಂತಾದ ಆಧ್ಯಾತ್ಮಿಕ ಗುಣಗಳನ್ನು ಗುರುತಿಸಿ, ಅದನ್ನು ಇತರರೂ ತಿಳಿಯು ವಂತೆ ಮಾಡುವುದೇ ಶ್ರೀರಾಮಕೃಷ್ಣರು ಅವನನ್ನು ಪರೀಕ್ಷೆ ಮಾಡಿದುದರ ಉದ್ದೇಶವಾಗಿತ್ತು.

ಹೀಗೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಕೇವಲ ಪರೀಕ್ಷಿಸು ವುದಷ್ಟೇ ಅಲ್ಲ, ಅವರಿಗೆ ಆಧ್ಯಾತ್ಮಿಕ ಜೀವನದಲ್ಲಿ ಮುಂದು ವರಿಯಲು ಇರುವ ಅಡ್ಡಿ ಆತಂಕಗಳನ್ನು ಕೂಡ ದೂರಮಾಡು ತ್ತಿದ್ದರು. ಒಮ್ಮೆ ಯೋಗೀಂದ್ರನು (ಸ್ವಾಮಿ ಯೋಗಾನಂದರು) ರಾಮಕೃಷ್ಣರನ್ನು ಭೇಟಿಯಾದಾಗ ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದನು, "ಮಹಾಶಯರೆ, ಕಾಮವನ್ನು ಜಯಿಸುವುದು ಹೇಗೆ?" ಆಗ ಶ್ರೀರಾಮಕೃಷ್ಣರೆಂದರು, "ಹರಿನಾಮಸ್ಮರಣೆಯನ್ನು ಮಾಡು, ಅದರಿಂದ ಕಾಮವನ್ನು ಗೆಲ್ಲಬಹುದು." ಶ್ರೀರಾಮಕೃಷ್ಣರ ಈ ಸರಳವಾದ ಉತ್ತರ ಅಥವಾ ಪರಿಹಾರದಿಂದ ಯೋಗೀಂದ್ರನಿಗೆ ಸಮಾಧಾನವಾಗಲಿಲ್ಲ. ಅವನೆಂದುಕೊಂಡ, ಇವರಿಗೆ ಬೇರೆ ವಿಧಾನಗಳು ಗೊತ್ತಿಲ್ಲ; ಅದಕ್ಕೇ ಏನೋ ಒಂದು ಹಾರಿಕೆಯ ಉತ್ತರವನ್ನು ನೀಡಿದ್ದಾರೆ ಎಂದು. ಮರುದಿನ ಅವನು ಅಲ್ಲೇ ಪಂಚವಟಿಯ ಬಳಿಯಲ್ಲಿ ವಾಸವಾಗಿದ್ದ ಒಬ್ಬ ಹಠಯೋಗಿಯ ಬಳಿಗೆ ಹೋಗಿ ಅವನ ಉಪದೇಶವನ್ನು ಕೇಳತೊಡಗಿದ. ಆಗ ಅಲ್ಲಿಗೆ ಬಂದ ಶ್ರೀರಾಮಕೃಷ್ಣರು ಯೋಗೀಂದ್ರನ ಕೈಹಿಡಿದುಕೊಂಡು ತಮ್ಮ ಕೊಠಡಿಯ ಕಡೆ ನಡೆಯುತ್ತಾ ಹೇಳಿದರು, "ನೀನು ಅಲ್ಲಿಗೆ ಯಾಕೆ ಹೋಗಿದ್ದೆ? ಇನ್ನು ಮುಂದೆ ಅಲ್ಲಿಗೆ ಹೋಗಬೇಡ. ನೋಡು, ನೀನು ಹಠಯೋಗವನ್ನು ಕಲಿತುಕೊಂಡರೆ ನಿನ್ನ ಮನಸ್ಸು ಕೇವಲ ದೇಹದ ಕಡೆಗೆ ತಿರುಗುತ್ತದೆ. ಅದು ಭಗವಂತ ನನ್ನು ಮರೆಯಿಸುತ್ತದೆ." ಅನಂತರ ಶ್ರೀರಾಮಕೃಷ್ಣರು ಹೇಳಿದಂತೆ ಯೋಗೀಂದ್ರನು ಏಕಾಗ್ರಚಿತ್ತದಿಂದ ಹರಿನಾಮಸ್ಮರಣೆಯನ್ನು ಮಾಡುವುದರಿಂದ ತನ್ನ ಸಮಸ್ಯೆಗೆ ಸಂಪೂರ್ಣವಾಗಿ ಪರಿಹಾರ ವನ್ನು ಕಂಡುಕೊಂಡನು. ಗುರುವಿನ ವಾಕ್ಯದಲ್ಲಿ ಸಂಪೂರ್ಣ ಶ್ರದ್ಧೆ ಇದ್ದರೆ ಎಲ್ಲ ತೊಡಕುಗಳಿಂದಲೂ ಪಾರಾಗಬಹುದು ಎಂದು ಇದರಿಂದ ಶ್ರೀರಾಮಕೃಷ್ಣರು ನಿರೂಪಿಸಿದರು.

ಇನ್ನೊಮ್ಮೆ ಶ್ರೀರಾಮಕೃಷ್ಣರು ಯೋಗೀಂದ್ರನ ವಿಶ್ವಾಸವನ್ನು ಪರೀಕ್ಷಿಸಿದ ಘಟನೆ ಹೀಗಿದೆ: ತನ್ನ ತಾಯಿಯ ಹಾಗೂ ಮನೆ ಯವರ ಒತ್ತಾಯಕ್ಕೆ ಮಣಿದು ಯೋಗೀಂದ್ರನು ಮದುವೆ ಯಾಗುತ್ತಾನೆ. ಅನಂತರ ಅವನು ಶ್ರೀರಾಮಕೃಷ್ಣರಲ್ಲಿಗೆ ಬರುವು ದನ್ನೇ ನಿಲ್ಲಿಸಿಬಿಟ್ಟ, ಏಕೆಂದರೆ ಶ್ರೀರಾಮಕೃಷ್ಣರ ಮೊದಲ ಉಪ ದೇಶವೇ ಕಾಮಕಾಂಚನಗಳ ತ್ಯಾಗ. "ಈಗ ನಾನು ಮದುವೆ ಯಾಗಿದ್ದೇನೆ. ಇನ್ನು ನನ್ನಿಂದ ಆಧ್ಯಾತ್ಮಿಕ ಜೀವನ ಸಾಧ್ಯವಿಲ್ಲ. ನನ್ನ ಜೀವನ ವ್ಯರ್ಥವಾಯಿತು" ಎಂದು ಅವನು ಯೋಚಿಸ ತೊಡಗಿದ. ಆಗ ಶ್ರೀರಾಮಕೃಷ್ಣರು ಒಂದು ಉಪಾಯವನ್ನು ಮಾಡಿದರು. ಯೋಗೀಂದ್ರನು ತನ್ನ ಮದುವೆಗೆ ಮೊದಲು ಕೆಲವು ಸಾಮಾನುಗಳನ್ನು ಕೊಂಡುಕೊಳ್ಳಲು ಕಾಳೀ ದೇವಸ್ಥಾನದ ಒಬ್ಬರ ಹತ್ತಿರ ಹಣವನ್ನು ಕೈಗಡವಾಗಿ ತೆಗೆದುಕೊಂಡಿದ್ದ. ಅನಂತರ

ಉಳಿದ ಹಣವನ್ನು ಹಿಂತಿರುಗಿಸಲಿಲ್ಲ. ಶ್ರೀರಾಮಕೃಷ್ಣರು ಅವನಿಗೆ ಆ ಹಣವನ್ನು ಹಿಂತಿರುಗಿಸುವಂತೆ ಹೇಳಿಕಳುಹಿಸಿದರು. ಆಗ ಯೋಗೀಂದ್ರನು ಅಂದುಕೊಂಡ: "ನಾನು ಇವರೊಡನೆ ಇಷ್ಟು ದಿನ ಒಡನಾಡಿದರೂ ನನ್ನನ್ನು ಒಬ್ಬ ಮೋಸಗಾರನೆಂದು ತಿಳಿದುಕೊಂಡಿದ್ದಾರಲ್ಲ! ಇರಲಿ, ಇಂದೇ ಹೋಗಿ ಆ ಹಣವನ್ನು ಹಿಂತಿರುಗಿಸಿಬಿಡುತ್ತೇನೆ. ಮತ್ತೆ ಆ ಕಡೆ ಮುಖವನ್ನೇ ಹಾಕು ವುದಿಲ್ಲ." ಶ್ರೀರಾಮಕೃಷ್ಣರಲ್ಲಿಗೆ ಬಂದಾಗ ಅವರು ಭಾವಾವಿಷ್ಟ ರಾಗಿದ್ದರು. ಯೋಗೀಂದ್ರನನ್ನು ಕಂಡು, "ನೀನು ಮದುವೆ ಯಾದರೆ ಏನಾಯಿತು? ನಾನೂ ಮದುವೆಯಾಗಿಲ್ಲವೆ? ಅದಕ್ಕೆ ಭಯವೇಕೆ? ನಿನಗೆ (ತಮ್ಮನ್ನು ತೋರಿಸಿ) ಇಲ್ಲಿಯ ಕೃಪೆಯಾದರೆ ನೂರು ಸಾವಿರ ಮದುವೆಗಳಿಂದಲೂ ಯಾವ ಕೆಡಕೂ ಸಂಭ ವಿಸದು. ನಿನಗೆ ಆಧ್ಯಾತ್ಮಿಕ ಜೀವನವನ್ನು ನಡೆಸಬೇಕೆಂದಿದ್ದರೆ ನಾನು ನಿನಗೆ ಅದು ಸಾಧ್ಯವಾಗುವಂತೆ ಮಾಡುತ್ತೇನೆ" ಎಂದರು. ಅಹೇತುಕಕೃಪಾಸಿಂಧುವಾದ ಶ್ರೀರಾಮಕೃಷ್ಣರಲ್ಲಿ ತಾನಿರಿಸಿದ ಅಲ್ಪ ವಿಶ್ವಾಸದ ಅರಿವಾಗಿ ಯೋಗೀಂದ್ರನು ಕಣ್ಣೀರು ಸುರಿಸುತ್ತ ಶ್ರೀರಾಮಕೃಷ್ಣರಿಗೆ ನಮಸ್ಕರಿಸಿದನು. ಹೀಗೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಆಧ್ಯಾತ್ಮಿಕ ಜೀವನದ ಸಂಪೂರ್ಣ ಭಾರವನ್ನು ತಾವೇ ವಹಿಸಿಕೊಂಡು ಅವರನ್ನು ರಕ್ಷಿಸುತ್ತಿದ್ದರು.

ಒಂದು ದಿನ ಶ್ರೀರಾಮಕೃಷ್ಣರು ತಮ್ಮ ಬಟ್ಟೆಯ ಮೇಲೆ ಒಂದು ಜಿರಳೆಯನ್ನು ನೋಡಿ ಅದನ್ನು ಹೊರಗೆ ತೆಗೆದುಕೊಂಡು ಹೋಗಿ ಸಾಯಿಸುವಂತೆ ಯೋಗೀಂದ್ರನಿಗೆ ಹೇಳಿದರು. ಆದರೆ ಅವನು ಅದನ್ನು ಸಾಯಿಸದೆ ಹಾಗೇ ಹೊರಗೆ ಬಿಟ್ಟುಬಿಟ್ಟ. ಇದನ್ನು ತಿಳಿದ ಶ್ರೀರಾಮಕೃಷ್ಣರು ಅವನನ್ನು ಬೈದು ಹೇಳಿದರು, "ನಾನು ನಿನಗೆ ಏನೂ ಹೇಳುತ್ತೇನೆಯೋ ಅದನ್ನೇ ಮಾಡು. ಇಲ್ಲದಿದ್ದರೆ ಮುಂದೆ ದೊಡ್ಡ ವಿಷಯಗಳಲ್ಲಿಯೂ ನಿನ್ನದೇ ಆದ ಬುದ್ಧಿಯನ್ನು ಉಪಯೋಗಿಸಿ ದುಃಖಕ್ಕೆ ಒಳಗಾಗುತ್ತೀಯೆ." ಈ ರೀತಿಯಲ್ಲಿ ಅವರು ಅವನನ್ನು ತಿದ್ದಿದರು. ಹೀಗೆ ಸಣ್ಣ ವಿಷಯಗಳಲ್ಲಿಯೂ ಜಾಗರೂಕರಾಗಿರುವಂತೆ ಅವರು ಶಿಷ್ಯರನ್ನು ಪರೀಕ್ಷಿಸಿ ಮಾರ್ಗದರ್ಶನ ನೀಡುತ್ತಿದ್ದರು.

ಒಮ್ಮೆ ಶಶಿ ಅಂದರೆ ಸ್ವಾಮಿ ರಾಮಕೃಷ್ಣಾನಂದರು ಶ್ರೀರಾಮಕೃಷ್ಣ ರನ್ನು ಭೇಟಿಯಾದ ಹೊಸತರಲ್ಲಿ ಅವರ ಪಾದಧೂಳಿಯನ್ನು ತೆಗೆದುಕೊಂಡು ಅವರ ಆಶೀರ್ವಾದವನ್ನು ಪಡೆಯಬೇಕೆಂಬ ಇಚ್ಛೆಯಿಂದ, ಅವರ ಪಾದವನ್ನು ಸ್ಪರ್ಶಿಸಲು ಹೋದಾಗ ಶ್ರೀರಾಮಕೃಷ್ಣರು ಅದಕ್ಕೆ ಅವಕಾಶವನ್ನು ಕೊಡದೇ ತಮ್ಮ ಪಾದವನ್ನು ಹಿಂತೆಗೆದುಕೊಂಡರು. ಆಗ ಶಶಿಗೆ ತಾನು ಅವರ ಆಶೀರ್ವಾದಕ್ಕೇ ಅರ್ಹನಲ್ಲವೇನೋ ಎಂದು ಬೇಸರವಾಯಿತು. ಅನಂತರ ಶ್ರೀರಾಮಕೃಷ್ಣರು ಅವನನ್ನು ಸಂತೈಸುತ್ತ ಹೇಳಿದರು, "ನಿನ್ನ ವ್ಯಾಕುಲತೆಯನ್ನು ಇನ್ನೂ ಹೆಚ್ಚಿಸುವುದಕ್ಕಾಗಿ ಮತ್ತು ಅಹಂಕಾರವನ್ನು ಹೋಗಲಾಡಿಸಲು ನಾನು ಹಾಗೆ ಮಾಡಿದೆ." ಹೀಗೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಪರೀಕ್ಷಿಸುವ ಉದ್ದೇಶ ಅವರು ಹೇಳಿದ ನಂತರವೇ ಅರ್ಥವಾಗುತ್ತದೆ. ಅಲ್ಲಿಯವರಿಗೆ ಶ್ರೀರಾಮಕೃಷ್ಣರ ಮಾತು ಅಥವಾ ಕೃತಿಯ ಒಳಗಿನ ಗುಟ್ಟು ನಮಗೆ ಗೊತ್ತಾಗುವುದಿಲ್ಲ.

ಇನ್ನೊಂದು ಘಟನೆ. ಸ್ವಾಮಿ ತ್ರಿಗುಣಾತೀತಾನಂದರು ಅಂದರೆ ಶಾರದಾಪ್ರಸನ್ನನು ಬಹಳ ಶ್ರೀಮಂತರ ಮನೆಯವನು. ಅವನ ಮನೆಯಲ್ಲಿ ಎಲ್ಲ ಕೆಲಸಗಳಿಗೂ ಸೇವಕರಿದ್ದರು. ಅವನು ಒಮ್ಮೆ ತನ್ನ ಗೆಳೆಯರ ಸಂಗಡ ಶ್ರೀರಾಮಕೃಷ್ಣರನ್ನು ಭೇಟಿಯಾಗಲು ಬಂದನು. ಅವನು ಬಂದ ತಕ್ಷಣ, ಶ್ರೀರಾಮಕೃಷ್ಣರು ಅವನಿಗೆ ಸ್ವಲ್ಪ ನೀರನ್ನು ಕೊಟ್ಟು, ನನ್ನ ಪಾದಗಳನ್ನು ತೊಳೆ ಎಂದರು. ಈ ಅನಿರೀಕ್ಷಿತವಾದ ಆದೇಶದಿಂದ, ಒಂದು ಕ್ಷಣ ಶಾರದಾ ಪ್ರಸನ್ನನ ಮುಖ ಅವಮಾನದಿಂದ ಕಳೆಗುಂದಿತು. ಏನು ಮಾಡ ಬೇಕೆಂದು ತಿಳಿಯದೆ ಅವನು ಪೇಚಾಡಿದನು. ಶ್ರೀರಾಮಕೃಷ್ಣರು ಮತ್ತೆ ಅವನಿಗೆ ಅದನ್ನೇ ಹೇಳಿದರು. ಆಗ ಬೇರೆ ದಾರಿ ಇಲ್ಲದೆ ಅವನು ಅವರು ಹೇಳಿದಂತೆ ಮಾಡಬೇಕಾಯಿತು. ಹೀಗೆ ಶ್ರೀರಾಮ ಕೃಷ್ಣರು ಶಾರದಾಪ್ರಸನ್ನನಲ್ಲಿದ್ದ "ನಾನು ಇತರರಿಗಿಂತ ಶ್ರೀಮಂತನು, ಉತ್ತಮ" ಎನ್ನುವ ಗರ್ವವನ್ನು ಒಮ್ಮೆಗೇ ಅಳಿಸಿ ಹಾಕಿದರು.

ಹೀಗೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಪರೀಕ್ಷಿಸಿ ಆಧ್ಯಾತ್ಮಿಕ ಜೀವನಕ್ಕೆ ಬೇಕಾದ ರಕ್ಷಣೆಯನ್ನು ಕೊಡುತ್ತಿದ್ದರು; ಅದರಲ್ಲಿ ಎದುರಾಗುವ ಅಡೆತಡೆಗಳನ್ನು ತೆಗೆದುಹಾಕಿ, ಪ್ರತಿಯೊಬ್ಬ ಶಿಷ್ಯನಿಗೂ ಅವನ ಹಿಂದಿನ ಸಂಸ್ಕಾರಗಳಿಗೆ ತಕ್ಕಂತೆ ಮಾರ್ಗ ದರ್ಶನ ನೀಡುತ್ತಿದ್ದರು.

**ಆಶ್ರಮದ ಕಾರ್ಯಕ್ರಮಗಳು**

**ಜನವರಿ ೨೦೦೯**

| | | |
|---|---|---|
| 1 | ಗುರುವಾರ | ಕಲ್ಪತರು ದಿನ |
| 2 | ಶುಕ್ರವಾರ | ಸ್ವಾಮಿ ಶಾರದಾನಂದ ಜಯಂತಿ |
| 7 | ಬುಧವಾರ | ಏಕಾದಶಿ |
| 10 | ಶನಿವಾರ | ಸ್ವಾಮಿ ತುರೀಯಾನಂದ ಜಯಂತಿ |
| 17 | ಶನಿವಾರ | ಸ್ವಾಮಿ ವಿವೇಕಾನಂದ ಜಯಂತಿ |
| 21 | ಬುಧವಾರ | ಏಕಾದಶಿ |
| 28 | ಬುಧವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| 30 | ಶುಕ್ರವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |

ಪ್ರತಿ ಶನಿವಾರ ಇಂಗ್ಲಿಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ ೬ ರಿಂದ ೭ ರವರೆಗೆ ಆಶ್ರಮದ ಸಭಾಂಗಣದಲ್ಲಿ ಪ್ರವಚನಗಳು ನಡೆಯುತ್ತವೆ.